# ನಿವೇದನೆ

## ಐಟಿ ಕ್ಷೇತ್ರದಲ್ಲಿ ಮಹಿಳೆ

ಶಾಲಾ ಕಾಲೇಜುಗಳ ಹಂತದಲ್ಲಿ ಐಟಿ ಕ್ಷೇತ್ರದತ್ತ ಹೆಣ್ಣುಮಕ್ಕಳ ಒಲವು ಹೆಚ್ಚಾಗಿಸಲು ಪ್ರೋತ್ಸಾಹಕ ಕ್ರಮಗಳನ್ನು ಕೈಗೊಳ್ಳಬೇಕು. ಕಾಲೇಜುಗಳಲ್ಲಿ ಅಧ್ಯಯನ ವಿಷಯಗಳನ್ನು ಆಯ್ಕೆ ಮಾಡುವಾಗ ಮಹಿಳೆಯರಿಗೇ ಮೀಸಲಾದ ವಿಷಯಗಳಿವು ಎನ್ನುವ ಮನೋಭಾವವನ್ನು ನಮ್ಮ ಹಿರಿಯರೂ ತೊರೆಯಬೇಕಿದೆ.

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿಸುವುದು ಹೇಗೆ ಎನ್ನುವ ಬಗ್ಗೆ ಇತ್ತೀಚೆಗೆ ದೊಡ್ಡ ಮಟ್ಟದ ಚರ್ಚೆ ನಡೆಯುತ್ತಿದೆ. ಜನಸಂಖ್ಯೆಯ ಪ್ರಮಾಣದಲ್ಲಿ ಶೇಕಡಾ 50ರಷ್ಟು ಪಾಲು ಹೊಂದಿರುವ ಮಹಿಳೆಯರು ಐಟಿ ಕ್ಷೇತ್ರದಲ್ಲಿ ಸೂಕ್ತ ಪಾಲು ಹೊಂದಿಲ್ಲ ಎನ್ನುವುದು ನಿಜವೇ. ಲಿಂಗ ಸಮಾನತೆಯ ಬಗ್ಗೆ ಮಾತನಾಡುವವರೂ ಈ ಕಡೆಗೆ ಅಷ್ಟಾಗಿ ಗಮನ ಹರಿಸಿಲ್ಲ ಎನ್ನುವುದು ಚಿಂತಿಸಬೇಕಾದ ಸಂಗತಿಯೇ. ಮಾಧ್ಯಮಗಳಲ್ಲೂ, ಐಟಿ ಕ್ಷೇತ್ರದ ಪುರುಷರ ಸಾಧನೆಗಳಿಗೆ ಹೆಚ್ಚು ಪ್ರಚಾರ ಮತ್ತು ಮಹತ್ವ ದೊರಕುತ್ತಿದೆಯೇ ಹೊರತು, ಮಹಿಳೆಯರು ನಡೆಸಿದ ಸಾಧನೆಗಳ ಬಗ್ಗೆ ಹೆಚ್ಚು ಒತ್ತು ಸಿಗುತ್ತಿಲ್ಲ. ಬಿಲ್ ಗೇಟ್ಸ್, ಸ್ಟೀವ್ ಜಾಬ್ಸ್, ಮಾರ್ಕ್ ಜೂಕರ್‌ಬರ್ಗ್ ಮುಂತಾದವರ ಬಗ್ಗೆ ದಿನನಿತ್ಯ ಏನಾದರೊಂದು ಸುದ್ದಿ ಇದ್ದೇ ಇರುತ್ತದೆ. ಅದೇ ಫೇಸ್‌ಬುಕ್, ಯೂಟ್ಯೂಬ್, ಐಬಿಎಂ ಕಂಪನಿಗಳಲ್ಲಿ ಮುಖ್ಯಸ್ಥರಾಗಿರುವ ಶೆರಿಲ್ ಸ್ಯಾಂಡ್‌ಬರ್ಗ್, ಸುಸಾನ್ ವೊಜಿಕಿ ಮತ್ತು ಗಿನ್ನಿ ರೊಮೆಟ್ಟಿ ಮುಂತಾದ ಮಹಿಳಾ ಸಾಧಕರ ಬಗ್ಗೆ ನಮ್ಮ ಮಾಧ್ಯಮದವರಿಗೆ ಎಷ್ಟು ಗೊತ್ತಿದೆ? ಇಂತಹ ಮಹಿಳಾ ಸಾಧಕರ ಕೊಡುಗೆಗಳ ಬಗ್ಗೆ ಹೆಚ್ಚಿನ ಮಾಹಿತಿ ಮತ್ತು– ಸುದ್ದಿಚಿತ್ರಗಳು ಪ್ರಕಟವಾಗುವ ಅಗತ್ಯವಿದೆ.

ಮಾಹಿತಿ ತಂತ್ರಜ್ಞಾನ ಉದ್ಯಮವು ಇತ್ತೀಚೆಗೆ ಕ್ಲೌಡ್ ಕಂಪ್ಯೂಟಿಂಗ್, ಸಾಮಾಜಿಕ ಮಾಧ್ಯಮ ಮತ್ತು ಮೊಬೈಲ್ ವ್ಯೂಹದ ಕುರಿತು ಹೆಚ್ಚು ಗಮನ ಹರಿಸುತ್ತಿದೆ. ಈ ಕ್ಷೇತ್ರದಲ್ಲಿ ಲಕ್ಷಾಂತರ ಹೊಸ ಉದ್ಯೋಗಗಳನ್ನು ಸೃಷ್ಟಿಸಲು ಹೇರಳ ಅವಕಾಶಗಳಿವೆ. ಮೂಲಸೌಲಭ್ಯ, ಡಾಟಾ ಸಂಗ್ರಹ, ಭದ್ರತೆ ಮುಂತಾದ ಕ್ಷೇತ್ರಗಳಲ್ಲಿ ಹೊಸ ಸಂಶೋಧನೆ ಮತ್ತು ವಿಸ್ತರಣೆಗಳಿಗೆ ಅಗಾಧ ಅವಕಾಶಗಳಿವೆ. ಇಂತಹ ಕ್ಷೇತ್ರಗಳ ಕಡೆಗೆ ಮಹಿಳೆಯರು ಗಮನ ಹರಿಸಬೇಕಾಗಿದೆ. ಈಗ ಸಾಫ್ಟ್‌ವೇರ್ ಕ್ಷೇತ್ರದಲ್ಲಿರುವ ಮಹಿಳೆಯರಲ್ಲಿ ಹೆಚ್ಚಿನವರು ಸೇವಾವಲಯದಲ್ಲಿ ಮಾತ್ರ ಕಂಡುಬರುತ್ತಿದ್ದಾರೆ. ಅದೇ ತಂತ್ರಾಂಶ ಅಭಿವೃದ್ಧಿ ಮತ್ತು ಸಂಶೋಧನೆಯ ಕ್ಷೇತ್ರಗಳಲ್ಲಿ ಅವರಿಗೆ ಹೆಚ್ಚಿನ ಅವಕಾಶಗಳು ಸಿಗುತ್ತಿಲ್ಲ.

ಕೆಲಸದ ಸ್ಥಳಗಳಲ್ಲಿ ಉತ್ಪಾದಕತೆಯ ಹೆಚ್ಚಳಕ್ಕೆ ಪುರುಷರಿಗಿಂತ ಮಹಿಳೆಯರ ಕೊಡುಗೆ ಹೆಚ್ಚು ಎನ್ನುವುದು ಹಲವು ಕ್ಷೇತ್ರಗಳಲ್ಲಿ ಸಾಬೀತಾಗಿದೆ. ಶಿಕ್ಷಣ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಸಾಮಾನ್ಯ ಮಹಿಳೆಯರೂ ಇದನ್ನು ಸಾಬೀತುಮಾಡಿ ತೋರಿಸಿದ್ದಾರೆ. ಮಹಿಳೆಯರು ಹೆಚ್ಚಾಗಿ ಕೆಲಸದಲ್ಲಿರುವ ಕ್ಷೇತ್ರಗಳಲ್ಲಿ ವೈವಿಧ್ಯಮಯ ಕೌಶಲಗಳ ಅನಾವರಣವಾಗುತ್ತದೆ. ತಂಡಸ್ಫೂರ್ತಿ, ಗ್ರಾಹಕರತ್ತ ಹೆಚ್ಚಿನ ಗಮನ ಮತ್ತು ಬಹುವಿಧ ಪ್ರತಿಭೆಗಳ ಸಂಗಮವಾಗಿ ಈ ಕಾರ್ಯಕ್ಷೇತ್ರಗಳು ರೂಪುಗೊಂಡಿವೆ. ಯಾವುದೇ ಕಂಪನಿಯಲ್ಲಿ 'ಅತ್ಯುತ್ತಮ ತಂಡ'ವೊಂದು ಕೆಲಸ ಮಾಡುವುದಕ್ಕಿಂತ ಹೆಚ್ಚು ಉತ್ತಮವಾಗಿ, ಗಂಡು– ಹೆಣ್ಣುಗಳನ್ನು ಒಳಗೊಂಡ ವೈವಿಧ್ಯಮಯ ತಂಡಗಳು ಕಾರ್ಯ ನಿರ್ವಹಿಸುತ್ತವೆ ಎನ್ನುವುದು ಬಹಳ ಕ್ಷೇತ್ರಗಳಲ್ಲಿ ಸಾಬೀತಾಗಿದೆ. ಇಂತಹ ಕೆಲಸದ ವಾತಾವರಣವನ್ನು ಐಟಿ ಕ್ಷೇತ್ರದಲ್ಲೂ ಹೆಚ್ಚಾಗಿ ಅನುಷ್ಠಾನಕ್ಕೆ ತರಬೇಕಿದೆ. ತನ್ಮೂಲಕ ಐಟಿ ಕ್ಷೇತ್ರದ ಉತ್ಪಾದಕತೆಯನ್ನು ಹೆಚ್ಚಿಸುವುದು ಮಾತ್ರವಲ್ಲ, ಕ್ಷಿಪ್ರ ಅವಧಿಯಲ್ಲಿ ಗುಣಮಟ್ಟದ ಉತ್ಪನ್ನಗಳನ್ನು ರೂಪಿಸುವುದೂ ಸಾಧ್ಯ. ಹೆಚ್ಚು ಮಹಿಳೆಯರು ಇರುವ ಐಟಿ ತಂಡಗಳಲ್ಲಿ ಎಷ್ಟೋ ಪ್ರಾಜೆಕ್ಟ್‌ಗಳು ನಿಗದಿತ ಸಮಯಕ್ಕಿಂತ ಮೊದಲೇ ಜಾರಿಗೊಳ್ಳುವುದು; ಮಹಿಳಾ ಮುಖ್ಯಸ್ಥೆ ಇರುವ ತಂಡದಲ್ಲಿ ಉತ್ಪನ್ನದ ಗುಣಮಟ್ಟ ಹೆಚ್ಚಾಗಿರುವುದು ಬಹುತೇಕ ಕಂಪನಿಗಳು ಕಂಡುಕೊಂಡಿರುವ ಸತ್ಯ. ಶಾಲಾ ಕಾಲೇಜುಗಳ ಹಂತದಲ್ಲಿ ಐಟಿ ಕ್ಷೇತ್ರದತ್ತ ಹೆಣ್ಣುಮಕ್ಕಳ ಒಲವು ಹೆಚ್ಚಾಗಿಸಲು ಪ್ರೋತ್ಸಾಹಕ ಕ್ರಮಗಳನ್ನು ಕೈಗೊಳ್ಳಬೇಕು. ಕಾಲೇಜುಗಳಲ್ಲಿ ಅಧ್ಯಯನ ವಿಷಯಗಳನ್ನು ಆಯ್ಕೆ ಮಾಡುವಾಗ ಮಹಿಳೆಯರಿಗೇ ಮೀಸಲಾದ ವಿಷಯಗಳಿವು ಎನ್ನುವ ಮನೋಭಾವವನ್ನು ನಮ್ಮ ಹಿರಿಯರೂ ತೊರೆಯಬೇಕಿದೆ. ಇತ್ತೀಚೆಗೆ ಎಂಜಿನಿಯರಿಂಗ್ ಕ್ಷೇತ್ರದತ್ತ ಹೆಣ್ಣುಮಕ್ಕಳ ಒಲವು ಹೆಚ್ಚುತ್ತಿರುವುದು ನಿಜ. ಆದರೆ ಅದು ಸಾಮಾನ್ಯ ಜ್ಞಾನದ ಕ್ಷೇತ್ರಗಳಲ್ಲೇ ಹೆಚ್ಚು ಕಾಣಿಸುತ್ತಿದೆ. ಅದರ ಜೊತೆಗೇ ಐಟಿ ವಲಯದ ಸಂಶೋಧನೆ ಮತ್ತು ಅಭಿವೃದ್ಧಿಯ ಕ್ಷೇತ್ರಗಳಿಗೆ ಹೆಣ್ಣುಮಕ್ಕಳು ಹೆಚ್ಚು ಆದ್ಯತೆ ನೀಡಬೇಕಿದೆ. ನಮ್ಮ ಶಿಕ್ಷಣ ಕ್ಷೇತ್ರದ ನೀತಿ ನಿರೂಪಕರು ಈ ನಿಟ್ಟಿನಲ್ಲಿ ಸೂಕ್ತ ಗಮನ ಹರಿಸಬೇಕು.

■ **ಬಿ.ಎಂ.ಹನೀಫ್**



ಚಿತ್ರ